# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1032 (1013)** |
| **ಸದಸ್ಯರ ಹೆಸರು** | : | **ಶ್ರೀ ಪ್ರತಾಪ್ ಸಿಂಹ ನಾಯಕ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **17.03.2025** |
| **ಉತ್ತರಿಸುವವರು** | : | **ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕು ನಿಡ್ಲೆ ಮತ್ತು ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಯ ಕೃಷಿಕರು ತಮ್ಮ ತೋಟಗಳಲ್ಲಿ ಬೆಳೆಯುತ್ತಿರುವ ಬಾಳೆ, ಅಡಿಕೆ, ತೆಂಗು, ಕರಿಮೆಣಸು, ಕೊಕ್ಕೊ, ಗೇರು ಮೊದಲಾದ ಬೆಳೆಗಳ ಉತ್ಪತ್ತಿಗಳನ್ನು ಕೋತಿಗಳ ಅತಿಯಾದ ಉಪಟಳದಿಂದಾಗಿ ಕಳೆದುಕೊಂಡು, ನಿರಂತರವಾಗಿ ಸಂಕಷ್ಟಕ್ಕೆ ಒಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಕ್ಷಿಣ ಕನ್ನಡ ಜಿಲ್ಲೆ, ಬೆಳ್ತಂಗಡಿ ತಾಲ್ಲೂಕು ನಿಡ್ಲೆ ಮತ್ತು ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಗೆ ಸಂಬಂಧಿಸಿದಂತೆ, ಕೋತಿಗಳಿಂದಾಗುವ ಉಪಟಳದ ಬಗ್ಗೆ ಸರ್ಕಾರದ ಗಮನದಲ್ಲಿರುತ್ತದೆ. ಕೋತಿಗಳ ಉಪಟಳದ ಕುರಿತು ಸ್ಥಳೀಯ ಗ್ರಾಮಸ್ಥರು ದೂರವಾಣಿ ಕರೆ ಮಾಡಿ ಸಿಬ್ಬಂದಿಗಳ ಗಮನಕ್ಕೆ ತಂದಾಗ, ಸದರಿ ಕೋತಿಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಪ್ರಯತ್ನ ಮಾಡಲಾಗುತ್ತಿದೆ. ಕೋತಿಗಳಿಂದಾಗುವ ಉಪಟಳ ಮತ್ತು ಬೆಳೆ ನಷ್ಟ ಸಂಬಂಧ ಪರಿಹಾರಕ್ಕಾಗಿ ರೈತರಿಂದ ಯಾವುದೇ ಅರ್ಜಿ ಸಲ್ಲಿಕೆಯಾಗಿರುವುದಿಲ್ಲ.<br><br>ಮುಂದುವರೆದು, ಸರ್ಕಾರಿ ಆದೇಶ ಸಂಖ್ಯೆ:ಅಪಜೀ. 156.ಎಫ್‌ಡಬ್ಲ್ಯೂಎಲ್.2022, ದಿನಾಂಕ: 18.01.2023 ರನ್ವಯ ವನ್ಯಜೀವಿಗಳ ಹಾವಳಿಯಿಂದಾಗುವ ಬೆಳೆನಷ್ಟ ಪ್ರಕರಣಗಳಿಗೆ ಪರಿಹಾರಧನವನ್ನು ನೀಡಲಾಗುತ್ತದೆ. |
| ಆ) | ಬಂದಿದ್ದಲ್ಲಿ, ಕೋತಿಗಳು ದೊಡ್ಡ ಮಟ್ಟದಲ್ಲಿ ಹಾನಿ ಮಾಡುತ್ತಿರುವುದರಿಂದ ಕೃಷಿ ಉತ್ಪತ್ತಿಗಳು ಆ ಕೃಷಿಕರ ಕೈಗೆ ಸಿಗದೆ ಅವರಿಗೆ ನಿರಂತರವಾಗಿ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಕ್ರಮ ವಹಿಸದಿರಲು ಕಾರಣಗಳೇನು; | |
| ಇ) | ಯಾವ ಕಾಲಮಿತಿಯೊಳಗೆ, ಕೋತಿಗಳ ಅತಿಯಾದ ಉಪಟಳವನ್ನು ಸಂಪೂರ್ಣವಾಗಿ ನಿವಾರಿಸಿ, ನಿಡ್ಲೆ ಮತ್ತು ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಯ ಕೃಷಿಕರು ತಮ್ಮ ತೋಟಗಳಲ್ಲಿ ಬೆಳೆಯುತ್ತಿರುವ ಬೆಳೆಗಳ ಕೃಷಿ ಉತ್ಪತ್ತಿಗಳು ಅವರಿಗೆ ಪೂರ್ಣ ಪ್ರಮಾಣದಲ್ಲಿ ಸಿಗುವಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು? | ನಿಡ್ಲೆ ಮತ್ತು ಸುತ್ತಮುತ್ತಲ ಗ್ರಾಮಗಳ ವ್ಯಾಪ್ತಿಗಳಲ್ಲಿ ಕೃಷಿಕರ ತೋಟಗಳಿಗೆ ಮಂಗಗಳು ಉಪಟಳ ನೀಡುತ್ತಿರುವುದು ಕಂಡುಬಂದಲ್ಲಿ, ಅವುಗಳನ್ನು ಸೆರೆಹಿಡಿದು ಸೂಕ್ತ ಸ್ಥಳಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ: ಅಪಜೀ 62 ಎಫ್‌ಡಬ್ಲ್ಯೂಎಲ್ 2025**

**(ಈಶ್ವರ ಬಿ.ಖಂಡ್ರೆ)**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.**